ಮಾಡಿದ್ದೇವೆ. ನಮ್ಮಲ್ಲಿ ರೆಡಿ ಇದೆ, ನಾವು ಮಾಡುತ್ತೇವೆ ಎಂದು ನಿಮ್ಮ ಅಡ್ವೊಕೇಟ್ ಜನರಲ್ ಹೇಳಿದ್ದಾರೆ. ಶ್ರೀ ಮಲಕರೆಡ್ಡಿಯವರು ಹೇಳಿದ್ದು ಸರಿಯಾಗಿದೆ. ವಿದ್ಯಾರ್ಥಿಗಳ ಜೀವನ ಹಾಳಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಕೇಂದ್ರಸರ್ಕಾರದವರು ಹೇಳಿದರೂ ಕೂಡ ಸುಪ್ರೀಂ ಕೋರ್ಟ್ ಒಪ್ಪಿಗೆಯನ್ನು ಕೊಡಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾನು ರೆಕಾರ್ಡ್ ಕೊಟ್ಟರೆ ಒಪ್ಪಿಕೊಳ್ಳುತ್ತೀರಾ? ಸರ್ಕಾರದವರು ಪಂಜಾಬ್‌ನ ಪರವಾಗಿ ಪರ್ಮಿಷನ್ ಕೊಟ್ಟಮೇಲೆ ನಮಗೆ ಏತಕ್ಕೆ ಕೊಡಲಿಲ್ಲ ; ಅಂದರೆ ಇಲ್ಲಿ ಅವಕಾಶದ ಅಗತ್ಯವಿಲ್ಲ, ಅದನ್ನು ನಾವು ಜಾರಿಗೆ ತರುತ್ತೇವೆಂದು ನೀವು ಹೇಳಿದ ದಾಖಲೆಗಳನ್ನು ನಮ್ಮ ಸರ್ಕಾರ ಸುಪ್ರೀಂ ಕೋರ್ಟಿಗೆ ಹೇಳಿದ ದಾಖಲೆಗಳನ್ನು ಕೊಡಲೇನು? ನೀವು ಸದನದಲ್ಲಿ ಸಭೆಗೆ ಅಪಚಾರ ಮಾಡುವಂತಹ ಮಾತನ್ನು ಹೇಳಿದ್ದೀರಿ.

ಅಧ್ಯಕ್ಷರು:- ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ:-(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಮಾನ್ಯ ಅಧ್ಯಕ್ಷರೇ, ದಿನಾಂಕ 1-9-93 ರ ಲಿಖಿತ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿನ 95 ಪ್ರಶ್ನೆಗಳ ಪಟ್ಟಿಯಲ್ಲಿ ಪ್ರಶ್ನೆಗಳ ಸಂಖ್ಯೆ 1, 45, 86, 196, 444, 164, 498, 307, 446, 448, 620, 571,572, 224, 225, 516, 278, 614, 301, 305, 56, 632, 517, 518, 97, 589, 590A, 552, 435, 605, 606, 487, 488, 569, 453, 456, 166, 530, 539, 541, ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನುಳಿದ 55 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ:- ರಾಷ್ಟ್ರೀಯ ಯೋಜನೆ ಅಡಿಯಲ್ಲಿ ದೊಡ್ಡ ರೋಗ ನಿವಾರಣೆಯ ಕಾರ್ಯಗತಕ್ಕಾಗಿ ಕೇಂದ್ರದಿಂದ ಬಂದ ಹಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 245(87)

ಶ್ರೀ ಜಿ. ಪುಟ್ಟಸ್ವಾಮಿ ಗೌಡ(ಹೊಳೆನರಸೀಪುರ)

ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಅ) ರಾಷ್ಟ್ರೀಯ ಯೋಜನೆ ಅಡಿಯಲ್ಲಿ ದೊಡ್ಡ ರೋಗ ನಿವಾರಣೆಯ ಕಾರ್ಯಗತಕ್ಕಾಗಿ ಕೇಂದ್ರ ಸರ್ಕಾರ ಕೊಟ್ಟ ವಂಟನ ಎಷ್ಟು;

ಆ) ಈ ಕಾರ್ಯಕ್ರಮವು ಯಾವಾಗ ಆರಂಭಗೊಂಡು, ಯಾವಾಗ ಮುಕ್ತಾಯವಾಗುತ್ತದೆ;

ಇ) ಮೇಲ್ಕಂಡ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರವು ತೆಗೆದುಕೊಂಡ : ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು.

ಶ್ರೀ ಕೆ.ಎನ್.ನಾಗೇಗೌಡ

(ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ರೂ. 153.55 ಲಕ್ಷಗಳು.

1990 ಮಾರ್ಚ್ ಮಾಹೆಯಲ್ಲಿ ಆರಂಭಗೊಂಡಿದ್ದು, 1996ರ ವೇಳೆಗೆ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ.

ಇಲ್ಲ.

ಉದ್ಭವಿಸುವುದಿಲ್ಲ.

Sub:- Permission to open private veterinary Dispensaries in the State.

UNSTARRED QUESTION NO. 246(86)

Sri. G. Puttaswamy Gowda(Holenarasipur)

Will the MINISTER OF STATE OF ANIMAL HUSBANDRY & VETY. SERVICES be pleased to state.

a) Whether the Government has permitted private people to open private Veterinary dispensaries in the State,

b) If so, number of them that were permitted and the places where these Private Veterinary dispensaries will be opened;

c) The amount of assistance given by the Government to the Private People;

d) Number of permissions proposed to be given during the year 1993-94.

Sri K.N. Nage Gowda

(Hon'ble Minister of State for Animal Husbandry)

a) Yes

b) There is a provision for 39 unemployed Veterinary graduates out of which the permission letters to 17 graduates are already issued to open the private Clinics which opened in 15 districts as mentioned in Annexure-A

c) Rs. 9.30 lakhs are earmarked for this purpose during the year 1993-94

d) 39

ವಿಷಯ:- ಹೊಳೆನರಸೀಪುರ ತಾಲ್ಲೂಕಿನ ಗ್ರಾಮಗಳಿಗೆ ಪದವಿಪೂರ್ವ ಕಾಲೇಜನ್ನು ಮಂಜೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 247(196)

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸಿಪುರ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. 1993-94ನೇ ಸಾಲಿನಲ್ಲಿ ಹೊಳೆ ನರಸೀಪುರ ತಾಲ್ಲೂಕಿನ ದೇವರಮುದ್ದನ ಹಳ್ಳಿ ಮಳಲೆ ಮತ್ತು ಮಾವನೂರು ಗ್ರಾಮಗಳಿಗೆ ಪದವಿ ಪೂರ್ವ ಕಾಲೇಜನ್ನು ಮಂಜೂರಾತಿ ಮಾಡಲು ಸರ್ಕಾರಕ್ಕೆ ಮನವಿ ಪತ್ರಗಳು ಬಂದಿವೆಯೇ;